ಶ್ರೀ ಆಜೀಜ್ ಸೇಠ್ (ಸಾರಿಗೆ ಸಚಿವರು):-

ಅ) ಹೌದು. ಈ ಪ್ರಸ್ತಾವನೆಯು ಪರಿಶೀಲನೆಯಲ್ಲಿ ಇರುತ್ತದೆ.

ಆ) ಈ ಹಂತದಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಯಾಣಿಕರಿಗೆ ಉತ್ತಮ ಸೌಲಭ್ಯ ಕಲ್ಪಿಸಲು ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯೊಡನೆ ಸ್ಪರ್ಧೆಯನ್ನು ಕಲ್ಪಿಸಲು.

ರಾಜ್ಯದಲ್ಲಿರುವ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ

522 (681). ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗ):- ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಸರ್ಕಾರವು ರಾಜ್ಯದಲ್ಲಿರುವ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಮೂಲಕ ರೈತರ ಉಪಯೋಗಕ್ಕಾಗಿ ರಸ್ತೆಗಳ ನಿರ್ಮಾಣ ಮತ್ತು ಅಭಿವೃದ್ಧಿಗೆ ಹಣವನ್ನು ಸಂಗ್ರಹಿಸಿರುತ್ತದೆಯೇ, ಹಾಗಿದ್ದಲ್ಲಿ ಆ ಹಣವೆಷ್ಟು?

ಆ) ಹಾಗಿದ್ದಲ್ಲಿ ಸರ್ಕಾರವು ಈ ಹಣವನ್ನು ಲೋಕೋಪಯೋಗಿ ಇಲಾಖೆಗೆ ಮತ್ತು ಜಿಲ್ಲಾ ಪರಿಷತ್ತುಗಳ ಮೂಲಕ ರಸ್ತೆಗಳ ನಿರ್ಮಾಣಕ್ಕಾಗಿ ಹಂಚುತ್ತದೆಯೇ?

ಇ) ಹಾಗಿದ್ದರೆ ಯಾವಾಗ?

ಶ್ರೀ ಎಸ್ ಆರ್. ಮೋರೆ (ಸರ್ಕಾರದ ಮುಖ್ಯ ಸಚಿವರು):-

ಅ) ಇಲ್ಲಾ

ಆ) ಮೇಲಿನ "ಅ" ಭಾಗಕ್ಕೆ ಕೊಟ್ಟ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಗಮನ ಸೆಳೆಯುವ ಸೂಚನೆ

ವಿಷಯ:- ಸಮಾಜ ಕಲ್ಯಾಣ ಸಲಹಾ ಮಂಡಳಿಯ ನೌಕರ ವರ್ಗದವರಿಗೆ ಸಂಬಳ ಪಾವತಿಯಾಗದಿರುವ ಬಗ್ಗೆ ಹಾಗೂ ಗ್ರಾಂಟ್ ಇನ್ ಎಡ್ ಇನ್‌ಸ್ಟಿಟ್ಯೂಷನ್‌ಗಳಿಗೆ ಗ್ರಾಂಟ್ಸ್ ಕೊಡದಿರುವ ಬಗ್ಗೆ.

ಶ್ರೀಮತಿ ಮೋಟಮ್ಮ (ಮೂಡಿಗೆರೆ):- ಮಾನ್ಯ ಉಪಾಧ್ಯಕ್ಷರೆಯವರೆ, ಕರ್ನಾಟಕ ಸಮಾಜ ಕಲ್ಯಾಣ ಸಲಹಾ ಮಂಡಳಿಯ ನೌಕರ ವರ್ಗದವರಿಗೆ ಸಂಬಳ ಪಾವತಿ ಮಾಡದಿರುವ ಬಗ್ಗೆ ಹಾಗು ಗ್ರಾಂಟ್ ಇನ್ ಎಡ್ ಇನ್‌ಸ್ಟಿಟ್ಯೂಷನ್‌ಗಳಿಗೆ ಗ್ರಾಂಟ್ಸ್ ಕೊಡದಿರುವ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):- ಮಾನ್ಯ ಉಪಾಧ್ಯಕ್ಷರೆಯವರೆ, ತಮ್ಮ ಅನುಮತಿ ಬೇರಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಸಲಹಾ ಮಂಡಳಿಯು ಶ್ರೀಮತಿ ಶೌಕತ್ ಖಿರೇಷಿಯವರ ಅಧ್ಯಕ್ಷತೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ. ಸಕಲಾ 250 ಎಸ್‌ಪಿಹೆಚ್ 88, ದಿನಾಂಕ 25-11-1989ರಲ್ಲಿ ಪುನರ್‌ರಚಿಸಲಾಗಿದ್ದು, ಈ ಅವಧಿಯು ದಿನಾಂಕ 24-11-91ಕ್ಕೆ ಮುಕ್ತಾಯಗೊಂಡಿರುತ್ತದೆ. ರಾಜ್ಯ ಸರ್ಕಾರವು ಈ ಮಂಡಳಿಯನ್ನು ಪುನರ್ ರಚಿಸುವ ಬಗ್ಗೆ ಪರಿಶೀಲಿಸುತ್ತಿದ್ದು, ಈ ನಡುವೆ ಮಂಡಳಿಯ ಕೇಸು ಕಾರ್ಯಗಳು ಸುಗಮವಾಗಿ ನಡೆಯಲೆಂಬ ಉದ್ದೇಶದಿಂದ ಸರ್ಕಾರದ ಆದೇಶ ಸಂಖ್ಯೆ: ಸಕಲಾ 59 ಎಸ್‌ಪಿಹೆಚ್ 91, ದಿನಾಂಕ 12-12-1991ರಂದು ವ್ಯವಸ್ಥಾಪಕ ನಿರ್ದೇಶಕರು, ವರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು, ಇವರನ್ನು ಸಮಾಜ ಕಲ್ಯಾಣ ಸಲಹಾ ಮಂಡಳಿಯ ಆಡಳಿತಾಧಿಕಾರಿಯಾಗಿ ಮುಂದಿನ ಆದೇಶದವರೆಗೆ ನೇಮಕ ಮಾಡಲಾಗಿತ್ತು.

ಶ್ರೀಮತಿ ಶೌಖತ್ ಖಿರೇಷಿಯವರು ಉಚ್ಚ ನ್ಯಾಯಾಲಯದಲ್ಲಿ ಈ ಆಡಳಿತಾಧಿಕಾರಿಯನ್ನು ನೇಮಿಸಿರುವ ಆದೇಶದ ಬಗ್ಗೆ ಹಾಗೂ ಮಹಿಳೆಯರ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರಿಗೆ ಸೂಚನೆ ನೀಡಿದ ಪತ್ರ ದಿನಾಂಕ 25-11-91ರ ಬಗ್ಗೆ ರಿಟ್ ಅರ್ಜಿ ಸಂಖ್ಯೆ: 27651:91 ಅನ್ನು ಸಲ್ಲಿಸಿ ತಡೆ ಆಜ್ಞೆಯನ್ನು ತಂದಿದ್ದರು. ತದ ನಂತರ ದಿನಾಂಕ 28-1-1992ರಂದು ಉಚ್ಚ ನ್ಯಾಯಾಲಯವು ಆಡಳಿತಾಧಿಕಾರಿಯನ್ನು ನೇಮಕ ಮಾಡಿರುವ ಆದೇಶ ದಿನಾಂಕ 12-12-1991 ಹಾಗೂ ಮಹಿಳೆಯರ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರಿಗೆ ನೀಡಿದ್ದ ಪತ್ರ ದಿನಾಂಕ 25-11-1991ನ್ನು ರದ್ದುಪಡಿಸಿತ್ತು. ಹಾಗೂ ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಸಲಹಾ ಮಂಡಳಿಯನ್ನು ಪುನರ್ ರಚಿಸುವ ಬಗ್ಗೆ ರಾಜ್ಯ ಸರ್ಕಾರದ ಇಚ್ಛೆ ಇದ್ದಲ್ಲಿ, ಕೂಡಲೇ ಕೇಂದ್ರ ಸಮಾಜ ಕಲ್ಯಾಣ ಮಂಡಳಿಯನ್ನು ಸಂಪರ್ಕಿಸುವಂತೆಯೂ ಹಾಗೂ ಅಲ್ಲಿಯವರೆಗೆ ಆಡಳಿತಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ ಕೇಂದ್ರ ಸಮಾಜ ಕಲ್ಯಾಣ ಮಂಡಳಿಯ ಸಹಮತಿ ಪಡೆದು ನೇಮಿಸಬಹುದೆಂದು ಆದೇಶಿಸಿತ್ತು. ಈ ಕಾರಣದಿಂದ ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಸಲಹಾ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ ಹಾಗೂ ಅಲ್ಲಿಯವರೆಗೆ ಆಡಳಿತಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ ಸರ್ಕಾರವು ತೀವ್ರವಾಗಿ ಸಂರಿಶೀಲಿಸುತ್ತಿದೆ. ಹಾಗೂ ಆದಷ್ಟು ಬೇಗನೆ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು.

ಶ್ರೀಮತಿ ಮೋಟಮ್ಮ:- ಸನ್ಮಾನ್ಯ ಅಧ್ಯಕ್ಷರೆಯವರೆ, ತಮಗೂ ಈ ಕರ್ನಾಟಕ ಸಮಾಜ ಕಲ್ಯಾಣ ಸಲಹಾ ಮಂಡಲಿಯ ವಿಷಯ ಚೆನ್ನಾಗಿ ಗೊತ್ತು ಎಂದು ನಾನು ಅಂದುಕೊಂಡಿದ್ದೇನೆ. ಏಕೆಂದರೆ ಈ ಮಂಡಲಿಯ ಸದಸ್ಯರು ತಾವು ಕೆಲಸ ಮಾಡಿದ್ದೀರಿ. ನಾವೂ ಕೆಲಸ ಮಾಡಿದ್ದೇವೆ. ಏನಾಗಿದೆಯೆಂದರೆ 24-11-1991ಕ್ಕೆ ಈ ಮಂಡಲಿಯ ಅವಧಿ ಮುಕ್ತಾಯವಾಗುತ್ತದೆ. ನಂತರ 12-12-1991ಕ್ಕೆ ಅಡ್ಮಿನಿಸ್ಟ್ರೇಟರ್ ಅಪಾಯಿಂಟ್ ಮಾಡಿರುವುದರ ಬಗ್ಗೆ ಅಡ್ಮಿನಿಸ್ಟ್ರೇಟರ್ ಹಾಕುತ್ತಾರೆ. ಅಷ್ಟರಲ್ಲಿ ಅಲ್ಲಿನ ಮಾಜಿ ಛೇರ್ಮನರಾಗಿದ್ದ ಶೌಕತ್ ಖಿರೇಷಿ ಅವರು ರಿಟ್ ಸಲ್ಲಿಸಿ ತಡೆಯಾಜ್ಞೆ ತರುತ್ತಾರೆ. ಈ ಮಧ್ಯೆ ಏನಾಗಿದೆ ಎಂದರೆ ಈಗ ಅಡ್ಮಿನಿಸ್ಟ್ರೇಟರ್ ಸರ್ಪರ್ ಕಿತ್ತುಹಾಕಿರುವ ನೆಸೆಯಿಂದ ರಿಟ್ ಅರ್ಜಿ ಹಾಕಿ ಮತ್ತೆ ಅನುಮತಿ ತಂದು ಖಿರೇಷಿ ಅವರು ಪುನಃ ಅಧ್ಯಕ್ಷರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ ಅವರಿಗೆ ಸರ್ಕಾರವು ಹೊಸ ಆರ್ಡರ್ ಬೇಕಾಗಿದೆ. ಅಲ್ಲಿಯವರೆಗೆ ಅವರು ಯಾವುದೇ ಚೆಕ್ಕಿಗೆ ಸೈನ್ ಹಾಕುವಹಾಗಿಲ್ಲ, ಯಾವುದೇ ಒಂದು ಆದೇಶ ನೀಡುವಹಾಗಿಲ್ಲ. ಹೀಗಾಗಿ ನವೆಂಬರ್ ತಿಂಗಳಿಂದ ಎಲ್ಲಾ ಇನ್‌ಸ್ಟಿಟ್ಯೂಷನ್‌ಗಳು ಸಫರ್ ಆಗುತ್ತಿವೆ. ಯಾವುದೇ ಒಂದು ಗ್ರಾಂಟ್ ರಿಲೀಸ್ ಆಗಿಲ್ಲ. ಸಮಾಜ ಕಲ್ಯಾಣ ಸಲಹಾ ಮಂಡಳಿಯಿಂದ ಅನೇಕ ಹೆಣ್ಣುಮಕ್ಕಳು ನಡೆಸುವ ಸಂಸ್ಥೆಗಳಿಗೆ ಗ್ರಾಂಟ್ಸ್ ಹೋಗುತ್ತಿವೆ. ತಮ್ಮ ಕ್ಷೇತ್ರದಲ್ಲೂ ಸಮಾಜ ಕಲ್ಯಾಣ ಸಲಹಾ ಮಂಡಲಿಯಿಂದ ಸಾಕಷ್ಟು ಗ್ರಾಂಟ್ಸ್ ತಾವು ತೆಗೆಸುಕೊಂಡಿದ್ದೀರಿ. ಫಸ್ಟ್ ಇನ್‌ಸ್ಟಾಲ್‌ಮೆಂಟ್ ಗ್ರಾಂಟ್ ಅಷ್ಟೆ ಸಿಕ್ಕಿದೆ. ಸೆಕೆಂಡ್ ಇನ್‌ಸ್ಟಾಲ್‌ಮೆಂಟ್ ಥರ್ಡ್ ಇನ್‌ಸ್ಟಾಲ್‌ಮೆಂಟ್ ಗ್ರಾಂಟ್ ರಿಲೀಸ್ ಆಗಿಲ್ಲ, ಜನವರಿ ಫೆಬ್ರವರಿಯಿಂದ ಅಲ್ಲಿಯ ನೌಕರರಿಗೆ ಸಂಬಳ ಆಗಿಲ್ಲ. ಅಲ್ಲಿ ನಾವು ಸಮಾಜ ಕಲ್ಯಾಣ ಮಂಡಳಿಯಿಂದ ನಡೆಸುತ್ತಿರುವ ಇನ್‌ಸ್ಟಿಟ್ಯೂಷನ್ ಕಥೆ ಏನಾಗಬೇಕು? ಮತ್ತೆ ಅಲ್ಲಿ ಕೆಲಸ ಮಾಡುವ ನೌಕರರ ಪರಿಸ್ಥಿತಿ ಏನಾಗಬೇಕು? ಸಮಾಜ ಕಲ್ಯಾಣ ಸಲಹಾ ಮಂಡಲಿಯನ್ನು ಪುನರ್‌ರಚನೆ ಮಾಡಬೇಕಾದರೆ ಇವರು ಕೇಂದ್ರ ಸರ್ಕಾರವನ್ನು ಸಂಪರ್ಕ ಮಾಡಿ ಅವರು ಪರ್ಮಿಷನ್ ಕೊಟ್ಟು ಇವರು ರಚನೆ ಮಾಡಬೇಕಾದರೆ ಇನ್ನೂ ಎಷ್ಟು ಸಮಯ ಆಗುತ್ತದೆ? ಹೀಗಾದರೆ ಹೆಣ್ಣು ಮಕ್ಕಳು ಈ ಒಂದು ಕರ್ನಾಟಕ ಸಮಾಜ ಕಲ್ಯಾಣ ಸಲಹಾ ಮಂಡಲಿಯಿಂದ ಯಾವ ಅನುಕೂಲ ಪಡೆಯುವುದಲ್ಲಿಯುತ್ತದೆ? ಹೆಣ್ಣುಮಕ್ಕಳಿಗೆ ನಿಜವಾಗಿಯೂ ಇದರಿಂದ ಎಷ್ಟು ಅನಾಹುತವಾಗಿದೆ ಎಂಬುದನ್ನು ತಾವು ವಿಚಾರ ಮಾಡಬೇಕು. ಈ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ಮಂತ್ರಿಗಳಾಗಲೀ ಸರ್ಕಾರವಾಗಲೀ ಏನು ಪ್ರಯತ್ನ ಮಾಡುತ್ತದೆ ಎಂಬುದನ್ನು ಸ್ಪಷ್ಟಪಡಿಸಬೇಕು.

ಶ್ರೀ ಬಿ. ಶಿವಣ್ಣ:- ಮಾನ್ಯ ಅಧ್ಯಕ್ಷರೆ, ಶ್ರೀಮತಿ ಖಿರೇಷಿ ಅವರಿಗೆ ಎರಡು ವರ್ಷಗಳು ಮಾತ್ರ ಎಂದು ಬೋರ್ಡ್ ಕಾನ್‌ಸ್ಟಿಟ್ಯೂಟ್ ಮಾಡಿತ್ತು. ಎರಡು ವರ್ಷ ಪೀರಿಯಡ್ ಎಕ್ಸ್‌ಪೈರಿ ಆದಮೇಲೆ ಸ್ಟೇಟ್ ಗೌರ್ನಮೆಂಟ್ ಡೈರೆಕ್ಟರ್ ಆಫ್ ವುಮನ್ ವೆಲ್‌ಫೇರ್ ಅವರಿಗೆ ಅಧಿಕಾರ ಕೊಟ್ಟು ಚೆಕ್ಸ್ ಇದ್ದರೆ, ಸ್ಯಾಲರಿ ಬಗ್ಗೆ ಹಣ ಬಿಡುಗಡೆ ಮಾಡುವುದಕ್ಕೆ ವ್ಯವಸ್ಥೆ ಮಾಡಿತ್ತು. ಅಷ್ಟರಲ್ಲಿ ಅಡ್ಮಿನಿಸ್ಟ್ರೇಟರ್ ಅಪಾಯಿಂಟ್ ಮಾಡಿತಕ್ಕ ಸಂದರ್ಭ ಬಂತು. ಆದ್ದರಿಂದ ಅಪಾಯಿಂಟ್ ಮಾಡಿದೆವು. ಆಗ ಮಾಜಿ ಅಧ್ಯಕ್ಷನಾದ ಶೌಖತ್ ಖಿರೇಷಿ ಅವರು ಕೋರ್ಟಿಗೆ ಹೋದರು. ಕೋರ್ಟಿನಲ್ಲಿ ತಡೆಯಾಜ್ಞೆ ಕೊಟ್ಟರು. ಕೊಟ್ಟು ಏನು ಹೇಳಿದರು ಅಂದರೆ ಸ್ಟೇಟ್ ಗೌರ್ನಮೆಂಟ್ ನೋಟಿಫಿಕೇಷನ್ ಮಾಡಬೇಕಾಗುತ್ತದೆ. ಪುನಃ ಸೆಂಟ್ರಲ್ ಸೋಷಿಯಲ್ ವೆಲ್‌ಫೇರ್ ಅಡ್ವೈಸರಿ ಬೋರ್ಡ್ ಅಫ್ರೂಡ್ ಪಡೆಯಬೇಕಾಗುತ್ತದೆ. ಎಂದು ಹೇಳಿದರು. ಅದೇ ಪ್ರಕಾರ ಸೆಂಟ್ರಲ್ ಗೌರ್ನಮೆಂಟ್ ಸೋಷಿಯಲ್ ವೆಲ್‌ಫೇರ್ ಅಡ್ವೈಸರಿ ಬೋರ್ಡಿಗೆ

ಟೆಲೆಕ್ಸ್ ಕೂಡ ಕಳುಹಿಸಿದೆವು. ರೀಕಾನ್‌ಸ್ಟಿಟ್ಯೂಟ್ ಮಾಡಬೇಕು ಎಂದು ಹೇಳಿದವು. ಆಗ ಅವರು ನಮಗೆ ಇವರನ್ನು ಮುಂದವರೆಸಬೇಕು ಎಂದು ಹೇಳಿದರು. ಆ ಬಗ್ಗೆ ನಾವಿನ್ನೂ ತೀರ್ಮಾನ ತೆಗೆದುಕೊಂಡಿಲ್ಲ, ರೀಕಾನ್‌ಸ್ಟಿಟ್ಯೂಟ್ ಮಾಡಬೇಕು ಎಂದು ಹೇಳಿದೆವು. ಆಗ ಅವರು ನಮಗೆ ಇವರನ್ನು ಮುಂದುವರೆಸಬೆಕು ಎಂದು ಹೇಳಿದರು. ಆ ಬಗ್ಗೆ ನಾವಿನ್ನೂ ತೀರ್ಮಾನ ತೆಗೆದುಕೊಂಡಿಲ್ಲ, ರೀಕಾನ್‌ಸ್ಟಿಟ್ಯೂಟ್ ಮಾಡಬೇಕೆಂದು ಸ್ಟೇಟ್ ಗಾರ್ನಮೆಂಟ್ ನಿರ್ಣಯ ಮಾಡಿದ ಕಾರಣ ನಾವು ಸೆಂಟ್ರಲ್ ಗೌರ್ನಮೆಂಟ್ ಸೋಷಿಯಲ್ ವೆಲ್‌ಫೇರ್ ಅಡ್ವೈಸರಿ ಬೋರ್ಡ್ ಛೇರ್ಮನ್ನರ ಜೊತೆ ಕಮ್ಯುನಿಕೇಷನ್ ಮಾಡುತ್ತಿದ್ದೇನೆ. ಸ್ಟೇಟ್ ಗೌರ್ನಮೆಂಟ್ ಮತ್ತು ಸೆಂಟ್ರಲ್ ಗೌರ್ನಮೆಂಟ್ ಇಬ್ಬರೂ ಕೂಡಿ ಆ ಕಮಿಟಿ ಕಾನ್‌ಸ್ಟಿಟ್ಯೂಟ್ ಮಾಡಬೇಕಾಗುತ್ತದೆ. ಅದಕ್ಕಾಗಿ ಸ್ವಲ್ಪ ಸಮಯ ಹಿಡಿಯುತ್ತದೆ. ಛೇರ್ಮನ್ನರಿಗೆ ಇಂಟಾಸ್ಟ್ ಮಾಡಿದಮೇಲೆ ನಿರ್ಣಯ ತೆಗೆದುಕೊಳ್ಳುತ್ತೇವೆ. ಅಷ್ಟರೊಳಗೆ ಯಾವ ಪ್ರಕಾರ ನೀವು ಹೇಳಿದ ಸಮಸ್ಯೆ ಇದೆ ಅದನ್ನು ಬಗೆಹರಿಸುವುದಕ್ಕೆ ಅಧಿಕಾರಿಗಳ ಜೊತೆ ಮಾತನಾಡಿ ನಾಪು ಆಮೇಲೆ ವಿಚಾರ ಮಾಡುತ್ತೇವೆ.

ಶ್ರೀಮತಿ ದಮಯಂತಿ ಬೋರೇಗೌಡ:- ಆಡ್ಹಾಕ್ ಸ್ಟೇಟರ್ ಅಪಾಯಿಂಟ್ ಮಾಡಿದಾಗ ಸೆಂಟ್ರಲ್ ಸೋಷಿಯಲ್ ವೇಲ್‌ಫೇರ್ ಅಡ್ವೈಸರಿ ಬೋರ್ಡ್ ಅಪ್ರೂವಲ್‌ಗೆ ನೀವು ಕಳುಹಿಸಿದ್ದರೆ ಚೆನ್ನಾಗಿತ್ತು. ಮಾಪ ಛೇರ್ಮನ್ನರು ಈಗ ಸ್ಟೇ ತಂದಿದ್ದಾರೆ. ಸ್ಟೇ ಬರುವುದನೊಳಗೆ ಚಾರ್ಜ್ ತೆಗೆದುಕೊಂಡಿರುವುದರಿಂದ That stay is infructions. But she has been allowed to operate the Bank accountant

ಆ ರೀತಿಯಾಗಿದೆ. ಇಡೀ ರಾಜ್ಯದ ಎಲ್ಲ ಸಂಘಸಂಸ್ಥೆಗಳಿಗೂ ಕೂಡ ಗ್ರಾಂಟ್-ಇನ್-ಎಡ್ ರೀಲೀಸ್ ಆಗದೆ ಮೊದಲನೇ ಕಂತು ಕೂಡ ರಿಲೀಸ್ ಆದರೆ ತೊಂದರೆಯಾಗಿದೆ. ಮತ್ತೆ ಮುಂದಿನ ವರ್ಷಕ್ಕೆ ಗ್ರಾಂಟ್-ಇನ್-ಏಡ್ ಅಪ್ಲಿಕೇಷನ್ ತೆಗೆದುಕೊಂಡು ಅದನ್ನು ಸೆಂಟ್ರಲ್ ಸೋಷಿಯಲ್ ವೆಲ್‌ಫೇರ್ ಅಡ್ವೈಸರಿ ಬೋರ್ಡಿಗೆ ರೆಕಮೆಂಡೇಷನ್ ಮಾಡುವ ಸೆಲಸ ಕೂಡ ಸ್ಥಗಿತವಾಗಿದೆ. ಏಕ್ಸ್-ಛೇರ್ಮನ್ನರು ಟೆಲಿಗ್ರಾಂ ಆಧಾರದ ಮೇಲೆ ಹೋಗಿ ಖುರ್ಚಿ ಮೇಲೆ ಕುಳಿತಿದ್ದಾರೆ. ಇಂಥ ವಿಪರ್ಯಾಸ ವಿಚಿತ್ರ ಪರಿಸ್ಥಿತಿಗೆ ಏತಕ್ಕೆ ಅವಕಾಶ ಕೊಡಬೇಕಾಗಿತ್ತು? ಆದ್ದರಿಂದ ಸರ್ಕಾರದವರು ಇದಕ್ಕೆ ಬೇಗ ಪ್ರಿಯಾರಿಟಿ ಕೊಡುತ್ತಿದ್ದಾರೆಂದು ನನಗನ್ನಿಸುತ್ತದೆ. ಇಂಥ ಗಂಭೀರವಾದ ಸಮಸ್ಯೆ ಬಗ್ಗೆ ಗಂಭೀರವಾದ ಚಿಂತನೆ ಮಾಡುತ್ತಿಲ್ಲ, ಇಂದು ಬಹಳ ಅಪಕಾಷ್ಮಕ್ಕೆ ಗುರಿಯಾಗಿದೆ. ದಯವಿಟ್ಟು ಇದನ್ನು ಬೇಗ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಿ. ಶಿವಣ್ಣ:- ಅಧ್ಯಕ್ಷರೇ ಲೋ ಪ್ರೈಯಾರಿಟಿ ಪ್ರಶ್ನೆ ಇಲ್ಲಿ ಬರುವುದಿಲ್ಲ, ಆ ಟರ್ಮ್ ಮುಗಿದ ಕೂಡಲೇ ಅಡ್ವಿನ್ಸ್ಟೈಟರ್ ಮಾಡಿದೆವು. ಅದೇ ಪ್ರಕಾರ ಟೆಲೆಕ್ಸ್ ಮೂಲಕ ಕೇಳಿದ್ದೇವೆ. ಆದರೆ ಅವರ ಉತ್ತರ ಬರುವುದು ಲೇಟ್ ಆಯಿತು. ಅವರಿಗೇ ಕಂಟಿನ್ಯೂ ಮಾಡಬೇಕೆಂದು ಅವರು ಹೇಳಿದರು. ರಾಜ್ಯ ಸರ್ಕಾರದಲ್ಲಿ ಕಂಟಿನ್ಯೂ ಮಾಡುವುದಕ್ಕೆ ಬರುವುದಿಲ್ಲ ಎಂದು ನಮ್ಮ ಮುಂದೆ ವಿಷಯ ಇದೆ. ಅಷ್ಟರೊಳಗೆ ನಾವು ಪವರ್ಸ್ ಕೊಟ್ಟಿದ್ದನ್ನು ಈಗಾಗಲೇ ಹೇಳಿದೆ. ಆದರೆ ಹೈಕೋರ್ಟ್‌ನವರು ತಡೆ ಆಜ್ಞೆ ಕೊಟ್ಟಿರುವುದರಿಂದ ನಾವು ವ್ಯವಸ್ಥೆ ಮಾಡುವುದಕ್ಕೆ ಆಗಿಲ್ಲ. ಆದಕಾರಣ ತಡೆ ಆಜ್ಞೆ ವೆಕೇಟ್ ಮಾಡಿಸಬೇಕು ಇಲ್ಲದಿದ್ದರೆ ಗೌರ್ನಮೆಂಟ್ ಆಫ್ ಇಂಡಿಯಾ ಜೊತೆ ನಾವು ಕಮ್ಯುನಿಕೇಷನ್ ಮಾಡಿಕೊಂಡು ಛೇರ್ಮನ್ ಕಂಟಿನ್ಯೂ ಆಗಲಿ. ಇವತ್ತು ಅಪ್ಲಿಕೇಷನ್ ಮೂವ್ ಮಾಡಿ ನೋಟಿಫಿಕೇಷನ್ ತೆರೆಯುವುದಕ್ಕೆ ಸಮಯ ಹಿಡಿಯುತ್ತದೆ. ಅಷ್ಟರೊಳಗೆ ಅಧಿಕಾರಿಗಳ ಜೊತೆ ಮಾತನಾಡಿ ಆದಷ್ಟು ಮಟ್ಟಿಗೆ ಮಾಡುತ್ತೇವೆ.

ಶ್ರೀಮತಿ ಸುಮಾ ವಸಂತ:- ನಮಗೂ ಕೂಡಾ ಸಾಕಷ್ಟು ಮಹಿಳಾ ಇನ್‌ಸ್ಟಿಟ್ಯೂಷನ್ಸ್‌ನಿಂದ ಅರ್ಜಿ ಬರುತ್ತಾ ಇವೆ. ಫರ್ಸ್ಟ್, ಸೆಕೆಂಡ್, ಫೈನಲ್ ಇನ್‌ಸ್ಟಾಲ್‌ಮೆಂಟ್ ಇನ್ನೂ ರಿಲೀಸ್ ಮಾಡಿಲ್ಲ. 4 ತಿಂಗಳು ಆಯಿತು ಇನ್ನೂ ಬೋರ್ಡ್ ಮೀಟಿಂಗ್ ಮಾಡಿಲ್ಲ, ಕರ್ನಾಟಕದಲ್ಲಿ, ಮಹಿಳಾ ಮಂಡಳಿಗಳದ್ದು ಇನ್ನೂ ಒಂದು ಪೈಸಾ ರಿಲೀಸ್ ಆಗಿಲ್ಲ. ಅವರಿಗೆ ಡ್ರಾಯಿಂಗ್ ಅಧಿಕಾರ ಕೊಡದೇ ಅಪ್ಲಿಕೇಷನ್ ಗ್ರಾಂಟ್ ಸರಿಯಾಗಿ ಆಗದಿದ್ದರಿಂದ ಬಹಳ ತೊಂದರೆಯಾಗುತ್ತಿದೆ. ಆದಷ್ಟು ಬಾಗ್ರತೆ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಬಿ. ಶಿವಣ್ಣ:- ತಗಬಹುದು.

ಶ್ರೀಮತಿ ಮಲ್ಲಾಜಮ್ಮ:- ಅಧ್ಯಕ್ಷರೇ, ಕೆಲವು ಬೋಗಸ್ ಸಂಸ್ಥೆಗಳು ಇವೆ. ಅವುಗಳು ಗ್ರಾಂಟ್ ತೆಗೆದುಕೊಂಡು ಕಾರ್ಯಕ್ರಮಗಳನ್ನು ನಡೆಸುತ್ತಿಲ್ಲ, ಅಂತಹವುಗಳ ಬಗ್ಗೆ ಏನು ಕ್ರಮ ತೆಗದುಕೊಂಡಿದ್ದೀರಿ? ಈಗಾಗಲೇ ಮಾರ್ಚ್ 31ರೊಳಗೆ ನೂರಾರು ಸಂಘಸಂಸ್ಥೆಗಳು ಗ್ರಾಂಟ್ ತೆಗೆದುಕೊಳ್ಳಬೇಕು. ಅಂಥ ಸಂಸ್ಥೆಗಳ ಬಗ್ಗೆ ಸಂಬಂಧಪಟ್ಟ

ಅಡಳಿತಾಧಿಕಾರಿಗಳು ಅಗಲಿ ಅಥವಾ ಛೇರ್ಮನ್ ಆಗಲೀ, ಶಿಫಾರಸ್ಸು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕು. ಆದು ಈಗ ವಿಳಂಬವಾಗಿದೆ. ಇದರ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಬಿ. ಶಿವಣ್ಣ:- ನಾನು ಆಷ್ಟೂ ಹೇಳಿದ್ದೇನೆ. ಆಗಬಹುದು ಎಂದು ಹೇಳಿದ್ದೇನೆ.

ಉಪಾಧ್ಯಕ್ಷರು:- ಮಾನ್ಯ ಸದಸ್ಯರು ಹೇಳಿದ್ದುದು ಏನಂದರೆ ಗ್ರಾಂಟ್ ಇನ್ ಏಡ್ ಆಪ್ಲಿಕೇಷನ್ಸ್ ಕರ್ನಾಟಕ ರಾಜ್ಯದಿಂದ, ಎಂದರೆ ಬೋರ್ಡ್‌ನಿಂದ ಸೆಂಟ್ರಲ್ ಗೌರ್ನಮೆಂಟ್ ಬೋರ್ಡ್‌ಗೆ ಈ ತಿಂಗಳು ಹೋಗದೇ ಇದ್ದರೆ ಮುಂದಿನ ವರ್ಷ ಯಾವ ಮಹಿಳಾ ಸಂಸ್ಥೆಗೂ ಒಂದು ಪೈಸೆ ಕೂಡ ಗ್ರಾಂಟ್ ಸಿಗುವುದಿಲ್ಲ. ಇದರ ಬಗ್ಗೆ ಪರಿಶೀಲನೆ ಮಾಡಿ ಬೇಗನೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಬಿ. ಶಿವಣ್ಣ:- ಆಗಬಹುದು. ಇವತ್ತೇ ಮಾತನಾಡಿ, ಕೇಂದ್ರ ಸರ್ಕಾರಕ್ಕೆ ಬರೆದು ಇವರ ಬಗ್ಗೆ ವ್ಯವಸ್ಥೆ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀಮತಿ ನೋಟಮ್ಮ:- ಆದಷ್ಟು ಬೇಗ ಆಗದೇ ಇದ್ದರೆ, ಮಾರ್ಚ್ ಅಥವಾ ಏಪ್ರಿಲ್ ತಿಂಗಳ ಒಳಗೆ ಒಂದು ತೀರ್ಮಾನಕ್ಕೆ ಬಂದು ಗ್ರಾಂಟ್ ಇನ್ ಏಡ ಸಂಸ್ಥೆಗಳಿಗೆ ಸಹಾಯ ಮಾಡಬೇಕು. ಇಲ್ಲವೇ ಇದ್ದರೆ, ಈ ಸಂಸ್ಥೆಗಳನ್ನು ನಡೆಸುತ್ತಿರುವ ಹೆಣ್ಣುಮಕ್ಕಳ ಜೊತೆ ನಾವೂ ಕೂಡಾ ಬಂದು ಮಾನ್ಯ ಮಂತ್ರಿಗಳ ಮನೆ ಮುಂದೆ ಧರಣಿ ಕುಳಿತುಕೊಳ್ಳಬೇಕಾಗುತ್ತದೆ.

ಉಪಾಧ್ಯಕ್ಷರು:- ಇನ್ನೂ ಒಂದು ವಾರದೊಳಗೆ ಏನಾದರೂ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು.

ಶ್ರೀ ಬಿ. ಶಿವಣ್ಣ:- ಹೌದು, ಹೌದು, ಒಂದು ತಿಂಗಳು.

ಶ್ರೀಮತಿ ಮಲ್ಲಾಜಮ್ಮ:- ಅಡಳಿತಾಧಿಕಾರಿಗಳಿಗೆ ಚೆಕ್ ಮುಖಾಂತರ ಹಣ ಡ್ರಾ ಮಾಡುವುದಕ್ಕೆ ಅಧಿಕಾರ ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಶಿವಣ್ಣ:- ಆ ಪವರ್ಸ್ ಇಲ್ಲ, ಹೈಕೋರ್ಟ್ ಸ್ಟೇ ಆರ್ಡರ್ ಕೊಟ್ಟಿದ್ದಾರೆ. ನಾವು ಅದನ್ನು ಮಾಡುವುದಕ್ಕೆ ಬರುವುದಿಲ್ಲ, ಆದರೂ ಕೂಡ ಅಧಿಕಾರಿಗಳ ಜೊತೆ ಮಾತನಾಡಿ ಏನು ಮಾಡಬೇಕೋ ಅದನ್ನು ಮಾಡುತ್ತೇನೆ.

ಶ್ರೀಮತಿ ಮೊಟಮ್ಮ:- ಮಾನ್ಯ ಸಭಾಧ್ಯಕ್ಷೆಗೆ ನಿಯವರೇ....

ಶ್ರೀ ಬಿ. ಶಿವಣ್ಣ:- ನಾನು ಎಲ್ಲಾ ಸಲಹೆಗಳನ್ನು ಒಪ್ಪಕೊಂಡಿದ್ದೇನೆ.

ಉಪಾಧ್ಯಕ್ಷರು.- ಇವರು ಎಲ್ಲಾ ಸಲಹೆಗಳನ್ನು ಒಪ್ಪಿಕೊಂಡಿದ್ದಾರೆ. ಈಗ ಮುಂದಿನ ವಿಷಯ ನಿಯಮ 334ರ ಕೆಳಗೆ ಚರ್ಚೆ.

1.25. P.M.

1) **ಗುಲ್ಬರ್ಗಾ ತಾಲ್ಲೂಕಿನಲ್ಲಿ ಕುಸನೂರು ತಾಂಡಾದಲ್ಲಿ ಕುಡಿಯುವ ನೀರಿನ ಅಭಾವ.**

ಶ್ರೀ ಮಾಯಿಣ್ಣಾ ಚೆನ್ನಾಡ್: ಮಾನ್ಯ ಉಪಾಧ್ಯಕ್ಷರೆ, ಗುಲ್ಬರ್ಗಾ ತಾಲ್ಲೂಕಿನಲ್ಲಿ ಇರುವ ಕುಸನೂರ ತಾಂಡಾಕ್ಕೆ ಕುಡಿಯುವ ನೀರಿನ ಸಲುವಾಗಿ ಎರಡು ಬೋರ್‌ವೆಲ್‌ಗಳನ್ನು ಹಾಕಿದರು ಒಣಗಿ ಹೋಗಿವೆ. ಅಲ್ಲಿರುವ ಸುಮಾರು 1200 ಜನರು ನೀರಿನಿಂದ ಬಳಲುತ್ತಿದ್ದಾರೆ. ಸುಮಾರು 5 ಕಿಲೋಮೀಟರ್ ದೂರದಿಂದ ನೀರು ತಂದು ಕುಡಿಯುವ ಪರಿಸ್ಥಿತಿಯಲ್ಲಿದ್ದಾರೆ. ಆದ್ದರಿಂದ ಸರ್ಕಾರ ಅವರು ಕುಡಿಯುವ ನೀರನ್ನು ವಾಹನದಿಂದ ಸಾಗಿಸಲು ಆಗಬಹುದೇ ಅಥವಾ ಬೇರೆ ನೀರಿನ ವ್ಯವಸ್ಥೆ ಆಗುವವರೆಗೆ ಸರ್ಕಾರವು ವಾಹನದಿಂದ ನೀರು ಪೂರೈಕೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಕುಸನೂರಿನ ತಾಂಡದಲ್ಲಿ ಹಾಲಿ ಜನಸಂಖ್ಯೆ 500 ಇರುತ್ತದೆ. ಈ ಜನತೆಗೆ ಕುಡಿಯುವ ನೀರನ್ನು ಒದಗಿಸಲು 5 ಕೊಳವೆ ಬಾವಿಗಳನ್ನು ತೋಡಿದ್ದು, ಎಲ್ಲವೂ ನಿಷ್ಫಲವಾಗಿರುವುದಾಗಿ ವರದಿಯಾಗಿದೆ. ಆದಕಾರಣ ಸರ್ಕಾರದ ವತಿಯಿಂದ ಸದರಿ ತಾಂಡಾದ 2-3ಕಿಲೋ ಮೀಟರ್ ದೂರದಲ್ಲಿ ಆದುಂ ಜಲ ಮೂಲವನ್ನು ಒದಗಿಸಿ ಅಲ್ಲಿಂದ ಪರಬರಾಜು ಯೋಜನೆ ಮುಖಾಂತರ ಕುಡಿಯುವ ನೀರನ್ನು ಪರೂರಾಗಿ ಒದಗಿಸಲು ಉದ್ದೇಶಿಸಲಾಗಿದೆ.